C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಎಸ್ ಸಿ ಸಂಖ್ಯೆ: **135/2024**

ಪ್ರಾಸಾ. **06** ಚಾಸಾ. **08**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಮ್ಮ |
| ಗಂಡನ ಹೆಸರು | : | ರಾಮೇಗೌಡ |
| ವಯಸ್ಸು | : | 62 ವರ್ಷಗಳು |
| ಉದ್ಯೋಗ | : | ಹೋಟೆಲ್ ಕೆಲಸ |
| ವಾಸ | : | ವೀರಭದ್ರೇಶ್ವರ ನಗರ, ಬೆಂಗಳೂರು. |

ಪ್ರಮಾಣ ವಚನ ಬೋಧಿಸಿದ ದಿನಾಂಕ: **29.04.2026.**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ-1 ನನ್ನ ಮಗಳು. ಚಾ.ಸಾ-9 ನನ್ನ ಮೊಮ್ಮಗಳು. ನನಗೆ ಆರೋಪಿ ಗೊತ್ತು.

2. ನಾವುಗಳು ಚಿಕ್ಕದೊಂದು ಹೋಟೆಲ್ ವ್ಯಾಪಾರ ಮಾಡುತ್ತೇವೆ. ಚಾ.ಸಾ-9 ಶಾಲೆಗೆ ಹೋಗುತ್ತಾರೆ. ಆರೋಪಿಯು ಘಟನೆಯ ನಿಖಟ ಪೂರ್ವ 5 ವರ್ಷಗಳ ಹಿಂದಿನ ದಿನಗಳಲ್ಲಿ ನಮ್ಮ ಸದರಿ ಹೋಟೆಲ್ ನ ಗ್ರಾಹಕನಾಗಿದ್ದು ಕಾರಣ ಪರಿಚಯವಿರುತ್ತಾನೆ.

3. ಅಂದಿನ ಕರೋನ ಪರಿಸ್ಥಿತಿ ಇದ್ದ ಕಾರಣ ನಮ್ಮ ಹೋಟೆಲ್ ವ್ಯಾಪಾರದಲ್ಲಿ ತೊಂದರೆ ಹಾಗೂ ತತ್ಸಂಬಧ ಹಣಕಾಸು ತೊಂದರೆಯಾದ ಕಾರಣ ಚಾ.ಸಾ-1 ನನ್ನ ಮಗಳು ಆರೋಪಿಯಿಂದ 40,000/- ರೂಗಳನ್ನು ಸಾಲವಾಗಿ

ಪಡೆದಿದ್ದು ಸದರಿ ಮೊತ್ತದ ಪೈಕಿ 10,000/- ರೂಗಳನ್ನು ನನ್ನ ಮಗಳು ಹಿಂದಿರುಗಿಸಿದ್ದಳು.

4. ಈಗ್ಗೆ ಮೂರು ವರ್ಷಗಳ ಒಂದು ದಿನ ರಾತ್ರಿ 8-00 ರ ಸುಮಾರಿಗೆ ಆರೋಪಿಯು ನಮ್ಮ ಮನೆಯ ಬಳಿ ಬಂದು ಗೇಟ್ ಶಬ್ಧ ಮಾಡಿದ್ದು ಚಾ.ಸಾ-1 ರವರನ್ನು ಕೇಳಿದನು. ಚಾ.ಸಾ-1 ರವರು ಹೋಟೆಲ್ ನಲ್ಲಿ ಇರುವುದಾಗಿ ಮತ್ತು ಆತನನ್ನು ಮರುದಿನ ಬೆಳಗ್ಗೆ ಹೋಟೆಲ್ ಗೆ ಬರಬೇಕೆಂದು ತಿಳಿಸಿದೆ.

5. ನನ್ನ ಮಗಳು ಚಾ.ಸಾ-1 ರಾತ್ರಿ 9-00 ಗಂಟೆಗೆ ಹೋಟೆಲ್ ನಿಂದ ಮನೆಗೆ ಹಿಂದಿರುಗಿದಳು. 9-30 ರ ಸಮಯಕ್ಕೆ ಆರೋಪಿ ಪುನಃ ಮನೆಯ ಬಳಿ ಬಂದು ಮನೆಯ ಬಾಗಿಲನ್ನು ತಟ್ಟಿದ. ನಾನು ಬಾಗಿಲನ್ನು ತೆಗೆದೆ. ಆಗ ಆರೋಪಿಯು ನನ್ನ ಮುಖ ಭಾಗಕ್ಕೆ ಸ್ಪ್ರೇ ಹಾಕಿದ್ದು ಅನಂತರ ಚಾಕುವನ್ನು ಉಪಯೋಗಿಸಿ ನನ್ನ ಕತ್ತು, ಕಿವಿ, ಕೈ, ಎಡ ಭುಜ, ಎಡಗೈಗಳಿಗೆ ಹಲ್ಲೆ ಮಾಡಿದ. ಪರಿಣಾಮ ನನಗೆ ತೀವ್ರ ಸ್ವರೂಪದ ರಕ್ತ ಗಾಯವಾಯಿತು.

6. ಸಾಕ್ಷಿ ಮುಂದುವರೆದು ಚಾ.ಸಾ-1 ರವರ ಮುಖಕ್ಕೂ ಸಹ ಸ್ಪ್ರೇ ಅನ್ನು ಹಾಕಿ ಆಕೆಗೂ ಸಹ ಚಾಕುವಿನಿಂದ ಆಕೆಯ ಕೆನ್ನೆ ಹಾಗೂ ಗದ್ದದ ಭಾಗಗಳಿಗೆ ಹಲ್ಲೆ ಮಾಡಿರುತ್ತಾನೆ. ಆರೋಪಿಯು ನಮ್ಮಗಳನ್ನು ಸಾಯಿಸುವ ಉದ್ದೇಶದಿಂದ ಈ ರೀತಿ ಹಲ್ಲೆ ಮಾಡಿದನು.

7. ಆಗ ನಮ್ಮ ಮನೆಯ ನರೆಹೊರೆಯವರು ಹಲ್ಲೆಯ ಸ್ಥಳಕ್ಕೆ ಬಂದು ನಮ್ಮನ್ನು ಆಸ್ಪತ್ರೆಗೆ ದಾಖಲಿಸಿದರು. ಆರೋಪಿ ಹಲ್ಲೆಯ ಸಮಯದಲ್ಲಿ ಉಪಯೋಗಿಸಿದ ಸ್ಪ್ರೇ ಮತ್ತು ಚಾಕುವನ್ನು ಹಾಗೂ ನಮ್ಮಗಳ ರಕ್ತ ಸಿಕ್ತ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳ ಪೈಕಿ ಈಗ ನನಗೆ ತೋರಿಸಿದ ವಸ್ತುವು ಆರೋಪಿ ಉಪಯೋಗಿಸಿದ ಸ್ಪ್ರೇಯರ್ ಮತ್ತು ಚಾಕು ಇರುತ್ತದೆ ಅವುಗಳನ್ನು ಈಗಾಗಲೇ ಮು.ಮಾ-4 ಮತ್ತು ಮು.ಮಾ-5 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಸೀರೆ

ಮತ್ತು ಕುಪ್ಪಸ ನಾನು ಹಲ್ಲೆಯ ಕಾಲಕ್ಕೆ ಧರಿಸಿದ್ದ ಬಟ್ಟೆಗಳಾಗಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಬಟ್ಟೆಯು ಹಲ್ಲೆಯ ಸಮಯದಲ್ಲಿ ಚಾ.ಸಾ-1 ರವರ ಧರಿಸಿದ್ದ ನೈಟಿ ಬಟ್ಟೆಯಾಗಿದೆ. ಅದನ್ನು ಈಗಾಗಲೇ ಮು.ಮಾ-3 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಶ್ರೀ ಆರ್ ಪಿ ವಕೀಲರಿಂದ ಆರೋಪಿಯ ಪರವಾಗಿಃ</u>

ಆರೋಪಿ ಪರ ವಕೀಲರು ದಂಡ ಪ್ರಕ್ರಿಯೆ ಸಂಹಿತೆ ಕಲಂ 231(2)ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪರಿಣಾಮ, ಪಾಟೀ ಸವಾಲನ್ನು ಮುಂದೂಡಲಾಯಿತು.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.